# ಸೇವಾಯಾನ ಟ್ರಸ್ಟ್ (ರಿ.)

#1167, ಮೊದಲನೆಯ ಘಟ್ಟ, ವಿಜಯನಗರ 4ನೇ ಹಂತ, ಮೈಸೂರು-570032

ನೋಂದಣಿ ಸಂಖ್ಯೆ : MYW-4-00269-2019-20

## 2022-2023 ರ ವಾರ್ಷಿಕ ವರದಿ







ಇ-ಮೇಲ್ : sevayanatrust@gmail.com
ಫೇಸ್ ಬುಕ್: Sevayana Trust Mysore
ವೆಬ್ ಸೈಟ್ : https://sevayana.1ngo.in
ಮೊ : 9535426335, 9513984848

Scanned with Oken Scanner

## ಸೇವಾಯಾನ ಸಂಸ್ಥೆಯ ಕುರಿತು :

ಸೇವಾಯಾನ ಟ್ರಸ್ಟ್ ಎರಡು ಸಾವಿರದ ಹತ್ತೊಂಬತ್ತರಲ್ಲಿ ತನ್ನ ಸೇವಾ ಕಾರ್ಯಗಳನ್ನು ಪ್ರಾರಂಭಿಸಿದ್ದಾಗ್ಯೂ, ಎಂಟನೆಯ ಜನವರಿ ಎರಡು ಸಾವಿರದ ಇಪ್ಪತ್ತರಂದು ಅಧಿಕೃತವಾಗಿ ನೋಂದಣಿಗೊಂಡಿತು. ಸಂಸ್ಥೆಯು ತನ್ನ ಪ್ರಾರಂಭಿಕ ಹಂತದಲ್ಲಿ ಹಿರಿಯ ನಾಗರೀಕ ಮಹಿಳೆಯರ ಆರೈಕೆ ಕೇಂದ್ರವನ್ನು ಪ್ರಾರಂಭಿಸಿ, ಉಚಿತವಾಗಿ ಆಶ್ರಯ, ಮೂಲಭೂತ ಸೌಲಭ್ಯಗಳು, ವೈದ್ಯಕೀಯ ವ್ಯವಸ್ಥೆ, ಮನೋರಂಜನೆ ಮೊದಲಾದವುಗಳು ಕೌಟುಂಬಿಕ ವಾತಾವರಣದಲ್ಲಿ ಒದಗಿಸಿಕೊಡುತ್ತಿದೆ. ಇಲ್ಲಿಯವರೆಗೆ 355 ಮಹಿಳೆಯರು ಸಂಸ್ಥೆಯಲ್ಲಿ ಆಶ್ರಯ ಪಡೆದು, ಪುನರ್ವಸತಿ ಹೊಂದಿರುತ್ತಾರೆ. ಪ್ರಸ್ತುತ 22 ಜನ ನಿರಾಶ್ರಿತ ಹಿರಿಯರು ಸಂಸ್ಥೆಯಲ್ಲಿ ಅಶ್ರಯ ಪಡೆದಿದ್ದಾರೆ.

ಸೇವಾಯಾನ ಸಂಸ್ಥೆಯು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗಾಗಿ ಹೊಲಿಗೆ, ಬಟ್ಟೆ ಬ್ಯಾಗ್ ತಯಾರಿಕೆ ಹಾಗೂ ಪೇಪರ್ ಬ್ಯಾಗ್ ತಯಾರಿಕೆಗಳಂತಹ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಅವರುಗಳನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸುವ ನಿಟ್ಟಿನಲ್ಲಿ ಸಲ್ಲಿಸುತ್ತಿದೆ.

## ವಿಷನ್:

ಸ್ವಸ್ಥ, ಸುಸ್ಥಿರ ಮತ್ತು ಅಭಿವೃದ್ಧಿಪರ ಸಮಾಜದ ರಚನೆ

## ಮಿಷನ್:

ಅಗತ್ಯ ಸೇವೆಗಳನ್ನು ಒದಗಿಸುವ ಮೂಲಕ ಸಾಮಾಜಿಕ ಅಭಿವೃದ್ಧಿಯನ್ನು
ಸುಗಮಗೊಳಿಸುವುದು

## ಉದ್ದೇಶಗಳು :

**ಹಿರಿಯ ನಾಗರೀಕರ ಕಲ್ಯಾಣ ಕಾರ್ಯಕ್ರಮಗಳು**

- ಹಿರಿಯ ನಾಗರೀಕರ ಆರೈಕೆ ಕೇಂದ್ರ ತೆರೆಯುವುದು
- ಹಿರಿಯ ನಾಗರೀಕರ ಸಹಾಯವಾಣಿ ತೆರೆಯುವುದು
- ಅಗತ್ಯ ಸರ್ಕಾರಿ ಸೇವೆಗಳನ್ನು ದೊರಕಿಸಿಕೊಡಲು ನೆರವಾಗುವುದು
- ವೃದ್ಧಾಪ್ಯದ ಅಂಚಿನಲ್ಲಿ ಗುಣಮಟ್ಟದ ಬದುಕನ್ನು ನಡೆಸಲು ಅಗತ್ಯವಾದ ಸ್ವಚ್ಛಂದ ವಾತಾವರಣವನ್ನು
  ಕಲ್ಪಿಸುವುದು

Scanned with Oken Scanner

**ಸಾಮಾಜಿಕ ಸಮಾನತೆ :**

- ನಾಗರೀಕರ ಹಕ್ಕುಗಳ ಪೂರೈಕೆಗೆ ನೆರವು ನೀಡುವುದು
- ಫಲಾನುಭವಿಗಳು ಸರ್ಕಾರಿ ಸವಲತ್ತುಗಳನ್ನು ಪಡೆಯುವಲ್ಲಿ ಸಹಕಾರ ನೀಡುವುದು
- ಲಿಂಗ ತಾರತಮ್ಯದ ವಿರುದ್ದ ಅರಿವು ಕಾರ್ಯಕ್ರಮಗಳನ್ನು ಆಯೋಜಿಸುವುದು

**ಮಹಿಳಾ ಸಶಕ್ತತೆ :**

- ಸಾಮಾಜಿಕ ಶೋಷಣೆಗೊಳಗಾದ ಮಹಿಳೆಯರಿಗೆ ರಕ್ಷಣೆ, ಪಾಲನೆ ಹಾಗೂ ನೆರವು ನೀಡುವುದು
- ಕೌಟುಂಬಿಕ ಸಲಹೆ, ಆಪ್ತಸಮಾಲೋಚನೆ ಹಾಗೂ ಕಾನೂನಿನ ನೆರವುಒದಗಿಸುವುದು
- ಸ್ವ ಸಹಾಯ ಸಂಘಗಳ ರಚನೆ ಹಾಗೂ ಸದಸ್ಯರ ಜೀವನ ಮಟ್ಟ ಸುಧಾರಣೆಗೆ ಒತ್ತು
- ವೃತ್ತಿಪರ ಹಾಗೂ ಜೀವನಕೌಶಲ್ಯ ತರಬೇತಿಗಳನ್ನು ನೀಡುವುದರ ಮೂಲಕ ಸದೃಢ ಹಾಗೂ ಸ್ವಾವಲಂಭಿಗಳನ್ನಾಗಿಸುವುದು
- ಸ್ವ ಉದ್ಯೋಗಕ್ಕೆ ಸಹಕಾರ ನೀಡಿ ಮಾರುಕಟ್ಟೆ ವ್ಯವಸ್ಥೆಯನ್ನು ಒದಗಿಸುವುದು

**ಮಕ್ಕಳ ಹಕ್ಕುಗಳ ರಕ್ಷಣೆ:**

- ಶಿಕ್ಷಣದ ಗುಣಮಟ್ಟದ ಸುಧಾರಣೆಗೆ ಪ್ರಯತ್ನಿಸುವುದು
- ಸರ್ಕಾರಿ ಮತ್ತು ಅನುದಾನಿತ ಶಾಲಾ-ಕಾಲೇಜುಗಳ ಮಕ್ಕಳ ಕೌಶಲ ಹೆಚ್ಚಿಸಲು ತರಬೇತಿ ಹಾಗೂ ಕಾರ್ಯಗಾರಗಳನ್ನು ಆಯೋಜಿಸುವುದು
- ಅಶಕ್ತ ಪೋಷಕರ ಮಕ್ಕಳ ಶಿಕ್ಷಣಕ್ಕೆ ನೆರವು
- ಸಮುದಾಯ ಮಟ್ಟದಲ್ಲಿ ಸಾಮಾಜಿಕ ಸಮಸ್ಯೆಗಳ ಕುರಿತು ಅರಿವಿನ ಕಾರ್ಯಗಾರಗಳನ್ನು ನಡೆಸುವುದು

**ಉತ್ತಮ ಸಮಾಜಕ್ಕಾಗಿ ಉತ್ತಮ ಆರೋಗ್ಯ:**

- ಆರೋಗ್ಯ ಸಮಸ್ಯೆಗಳನ್ನು ಕುರಿತು ಸಮುದಾಯ ಮಟ್ಟದಲ್ಲಿಅರಿವು ಕಾರ್ಯಕ್ರಮಗಳನ್ನು ಆಯೋಜಿಸುವುದು
- ಹದಿಹರೆಯದವರಿಗೆ ಲೈಂಗಿಕ ವಿಚಾರಗಳ ಕುರಿತು ಅರಿವು ಮೂಡಿಸುವುದು
- ಆರೋಗ್ಯ ಶಿಬಿರಗಳನ್ನು ನಡೆಸುವುದು
- ಸಂಕಷ್ಟದಲ್ಲಿರುವ ಅನಾರೋಗ್ಯ ಪೀಡಿತ ಕುಟುಂಬಗಳಿಗೆ ನೆರವು ನೀಡುವುದು

**ಸ್ವಚ್ಚ ಪರಿಸರ ಅಭಿಯಾನ:**

- ಸ್ವಚ್ಚತೆಯ ಕುರಿತ ಅರಿವು ಮೂಡಿಸುವುದು
- ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ನಡೆಸುವುದು

Scanned with Oken Scanner

- ಜಲ ಸಂರಕ್ಷಣೆಯ ಕುರಿತು ಕಾರ್ಯಕ್ರಮಗಳನ್ನು ಆಯೋಜಿಸುವುದು

**ವಕಾಲತ್ತು**:

- ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರೀಕರ ಕಲ್ಯಾಣಕ್ಕಾಗಿ ಅಗತ್ಯ ನಿಯಮಗಳನ್ನು ಜಾರಿಗೊಳಿಸುವಲ್ಲಿ ವಕಾಲತ್ತು ವಹಿಸುವುದು

## ಸಂಸ್ಥೆಯ ಧರ್ಮದರ್ಶಿಗಳ ವಿವರ :



1. ಪ್ರಭಾಮಣಿ.ಎಸ್-ಅಧ್ಯಕ್ಷರು
2. ಆಶಾ. ಎಂ. – ಕಾರ್ಯದರ್ಶಿಗಳು
3. ಮಂಜುನಾಥಸ್ವಾಮಿ. ಎಂ –ಖಜಾಂಚಿ ಮತ್ತು ಧರ್ಮದರ್ಶಿಗಳು
4. ಪ್ರಭುಶಂಕರ್ ಕೆ.ಎಂ – ಧರ್ಮದರ್ಶಿಗಳು
5. ರಂಜಿತ್ ಥಾಮಸ್ ಡೆಸ್ಸಾ –ಧರ್ಮದರ್ಶಿಗಳು

## ಅಧ್ಯಕ್ಷರ ಮಾತುಗಳು :

ಸೇವಾಯಾನ ಅಸಹಾಯಕರ ಪರವಾಗಿ ಮಿಡಿಯುವ ಸಮಾನ ಮನಸ್ಕರ ಕನಸು. ಸ್ವಯಂ ಸೇವಾ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಅನುಭವ, ಒಂದಿಷ್ಟು ಸಾಮಾಜಿಕ ಬದ್ಧತೆಯೊಡನೆ 2019ರಲ್ಲಿ ಮೈಸೂರು ಜಿಲ್ಲೆಯಾದ್ಯಾಂತ ಆಯ್ದ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಸಾಮಾಜಿಕ ನಿರ್ಲಕ್ಷಿತರ ಅವಶ್ಯಕತೆಗಳ ಬಗ್ಗೆ ಸಮೀಕ್ಷೆಯೊಂದನ್ನು ನಡೆಸಿದೆವು. ಅಚ್ಚರಿಯಲ್ಲದಿದ್ದರೂ ನಿರೀಕ್ಷೆಗೂ ಮಿಗಿಲಾದ ಫಲಿತಾಂಶ ನಮ್ಮ ಮುಂದೆ ಇತ್ತು! ಪ್ರತೀ ದಿನ ಸಂಘ-ಸಂಸ್ಥೆಗಳಿಗೆ ಆಶ್ರಯ ಕೋರಿ ಬರುವವರಲ್ಲಿ ಹಿರಿಯ ನಾಗರೀಕರ ಸಂಖ್ಯೆಯೇ ಹೆಚ್ಚಿತ್ತು. ಹಣಕೊಟ್ಟು ಸವಲತ್ತು ಪಡೆಯುವವರ ಸಂಖ್ಯೆಯೇನೂ ಕಡಿಮೆಯಿರಲಿಲ್ಲ. ಅಂತವರಿಗಾಗಿ ಗಲ್ಲಿಗೊಂದು ಸಂಸ್ಥೆಗಳು ತಲೆ ಎತ್ತಿದ್ದವು! ಆದರೆ ಹಣವಿಲ್ಲದವರಿಗೆ? ಬೆರಳೆಣಿಕೆಯಷ್ಟು ಸಂಸ್ಥೆಗಳಿದ್ದರೂ ಒಂದೆರಡನ್ನು ಹೊರತುಪಡಿಸಿ ಉಳಿದವು ಸಮರ್ಪಕ ನಿರ್ವಹಣೆಗಳಿಲ್ಲದೆ ಸೊರಗಿದ್ದವು.

ವಯಸ್ಸು, ಅನುಭವದಲ್ಲಿ ಹಿರಿಯರಾಗಿ, ಒಂದು ಇಡೀ ಕುಟುಂಬವನ್ನು ನಡೆಸಿದ ಸಾರಥಿಗಳು, ಬದುಕಿನ ಕೊನೆಯಲ್ಲಿ ಅತಂತ್ರರಾಗಿ ಆಶ್ರಯವಿಲ್ಲದೆ ಅಲೆಯುವುದು ವಿಷಾದದ ವಿಷಯವೇ ಸರಿ. ಅಂತವರಿಗೆ ಒಂದು ಗೌರವಯುತ ನೆಲೆಯನ್ನು ದೊರಕಿಸಿಕೊಡಬೇಕೆನ್ನುವುದು ನಮ್ಮ ಆದ್ಯತೆಯಾಯಿತು. ಪರಿಣಾಮವಾಗಿ 2020ರ ಜನವರಿಯಲ್ಲಿ ಸೇವಾಯಾನ ಸಂಸ್ಥೆ ಅಧಿಕೃತವಾಗಿ ನೋಂದಣಿಗೊಂಡು, ತನ್ನ ಸೇವಾ ಕಾರ್ಯಗಳನ್ನು ಪ್ರಾರಂಭಿಸಿತು. ಕಟ್ಟಡವೊಂದನ್ನು ಬಾಡಿಗೆಗೆ ಪಡೆದು,

Scanned with Oken Scanner

ಪ್ರಾರಂಭದಲ್ಲಿ ಹತ್ತು ಮಂದಿ ಮಹಿಳೆಯರಿಗಾಗಿ ಉತ್ತಮ ವ್ಯವಸ್ಥೆಗಳೊಂದಿಗೆ ಉಚಿತವಾಗಿ ಆಶ್ರಮವನ್ನು ಸಿದ್ಧಗೊಳಿಸಲಾಯಿತು. ಇತರೆ ಸಂಸ್ಥೆಗಳಿಂದ, ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯಿಂದ, ಪೋಲೀಸ್ ಮೂಲಗಳಿಂದ, ಸಾರ್ವಜನಿಕರ ಕಡೆಯಿಂದ ಬಂದಂತಹ ಅಸಹಾಯಕ ಪರಿಸ್ಥಿತಿಯಲ್ಲಿರುವ ಹಿರಿಯರಿಗೆ ಆಶ್ರಯ ನೀಡಿ, ಮೂಲಭೂತ ಸೌಲಭ್ಯಗಳು, ವೈದ್ಯಕೀಯ ತಪಾಸಣೆ, ಮನೋರಂಜನೆ, ಆಪ್ತಸಮಾಲೋಚನೆಯಂತಹ ಸವಲತ್ತುಗಳನ್ನು ಒದಗಿಸಿಕೊಡುತ್ತಾ, ಅವರ ಕಣ್ಣಲ್ಲಿ ಸಂತೋಷವನ್ನು ನೋಡಿ ನಾವು ತೃಪ್ತಿಪಡಲಾರಂಭಿಸಿದೆವು. ಪರಿಣಾಮವಾಗಿ ಸೇವಾಯಾನಕ್ಕೆ ಆಶ್ರಯ ಅರಸಿ ಬರುವವರ ಸಂಖ್ಯೆ ಅಧಿಕವಾಯಿತು.

ಸಂಸ್ಥೆಗೆ ಬಂದವರಲ್ಲಿ ಕುಟುಂಬದ ಮೂಲಗಳಿದ್ದಲ್ಲಿ, ಅವರಿಗೆ ಆಪ್ತ ಸಮಾಲೋಚನೆ ನಡೆಸಿ, ಅವರ ಸಮಸ್ಯೆಗಳನ್ನು ಗ್ರಹಿಸಿ, ಪರಿಹರಿಸಿ ಪುನಃ ಕುಟುಂಬಕ್ಕೆ ಸೇರಿಸುವ ಕೆಲಸವನ್ನು ಸಹ ಸೇವಾಯಾನ ಮಾಡಲಾರಂಭಿಸಿತು. ಚೆನ್ನಾಗಿ ಬಾಳಿ, ಬದುಕಿ ಅಂದು ಹತ್ತಾರು ಜನಕ್ಕೆ ಅನ್ನ ಹಾಕಿದ ಅದೇ ಕೈಗಳು ಇಂದು ತುತ್ತು ಅನ್ನಕ್ಕಾಗಿ ಇನ್ನೊಬ್ಬರ ಮುಂದೆ ಕೈಚಾಚುವಾಗ ಬರುವ ಕಣ್ಣೀರನ್ನು ಸೀರೆಯ ಸೆರಗಿನಿಂದ ಒರೆಸಿಕೊಳ್ಳುತ್ತಿದ್ದವು. ಯಾರ ಸ್ವಾಭಿಮಾನಕ್ಕೂ ಧಕ್ಕೆಯಾಗಬಾರದೆಂದು ತೀರ್ಮಾನಿಸಿ, ದಾನಿಗಳಿಂದ ಹಳೆಯ ದಿನಪತ್ರಿಕೆಗಳನ್ನು ಸಂಗ್ರಹಿಸಿ, ಪ್ರಾರಂಭದ ಅರ್ಧ ದಿನ ಸಂಸ್ಥೆಯ ಆಶ್ರಿತರಿಂದ ಪೇಪರ್ ಬ್ಯಾಗ್ ತಯಾರಿಕೆಯನ್ನು ಮಾಡಿಸುವ ಕಾರ್ಯವನ್ನು ಪ್ರಾರಂಭಿಸಿದೆವು. ಇದು ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿದ್ದಲ್ಲದೇ, ಅವರ ಸ್ವಾಭಿಮಾನವನ್ನೂ ಉಳಿಸಿತು. ಅಲ್ಲದೇ ಆರ್ಥಿಕವಾಗಿ ಹಿಂದುಳಿದ ಸ್ಥಳೀಯ ಮಹಿಳೆಯರಿಗೆ ಉಚಿತವಾಗಿ ಟೈಲರಿಂಗ್ ತರಬೇತಿಯನ್ನು ನೀಡಿ, ಅವರಿಂದ ಬಟ್ಟೆ ಬ್ಯಾಗ್‌ಗಳನ್ನು ಮಾಡಿಸುವ ಕಾಯಕವನ್ನೂ ಸಂಸ್ಥೆ ಪ್ರಾರಂಭಿಸಿತು.

ಹತ್ತು ಜನರಿಂದ ಇಪ್ಪತ್ತು ಜನರಿಗೆ ವಿಸ್ತಾರಗೊಂಡ ಸೇವಾಯಾನ, ಸ್ಥಳೀಯವಾಗಿ ಉತ್ತಮ ಗೌರವ, ಮನ್ನಣೆಗಳೊಡನೆ ಗುರುತಿಸಿಕೊಂಡಿದೆ. ಈ ನಡುವೆ ಸಂಸ್ಥೆಯ ಆಶ್ರಿತೆ ಕಮಲಮ್ಮನವರು ಹೃದಯಾಘಾತದಿಂದ ಸಾವನ್ನಪ್ಪಿದ್ದು, ಎಲ್ಲರನ್ನು ಒಂದಷ್ಟು ದಿನ ಆತಂಕಕ್ಕೆ ದೂಡಿತ್ತು. ಉತ್ತಮ ಪರಿಸರ, ಧ್ಯಾನ, ಪ್ರಾಣಯಾಮ, ಪ್ರಾರ್ಥನೆ, ಹೊರವಿಹಾರಗಳು, ಭಜನೆ ಸೇವಾಯಾನದ ಬಹುಮುಖ್ಯ ಚಟುವಟಿಕೆಗಳಾಗಿದ್ದು, ಪೇಪರ್ ಬ್ಯಾಗ್ ತಯಾರಿಕೆ, ಬಟ್ಟೆ ಬ್ಯಾಗ್ ತಯಾರಿಕೆಗಳು ನಿರಂತರವಾಗಿ ನಡೆಯುತ್ತಾ ಆರ್ಥಿಕವಾಗಿ ನೆರವಾಗುತ್ತಿವೆ. ಇದೆಲ್ಲದರ ಮಧ್ಯೆ ಸೇವಾಯಾನದ ಬಾಡಿಗೆ ಕಟ್ಟಡವನ್ನು ಆಗಿಂದಾಗ್ಗೆ ಬದಲಾಯಿಸಬೇಕಾಗಿರುವ ಸ್ಥಿತಿ ಕೂಡ ಅತ್ಯಂತ ಸವಾಲಿನ ವಿಚಾರವೇ ಆಗಿದೆ. ವೃದ್ಧಾಶ್ರಮವೆಂದಾಕ್ಷಣ ಬಾಡಿಗೆಗೆ ಮನೆ ಕೊಡಲು ಒಪ್ಪದ ಜನರ ಸಂಕುಚಿತ ಮನಸ್ಥಿತಿಯ ಬಗ್ಗೆ ಬೇಸರವೆನಿಸುವ ಸಮಯಕ್ಕೆ ಯಾರೋ ಒಬ್ಬರು ಬಾಡಿಗೆಗಾಗಿ ಮೈಸೂರಿನ ವಿಜಯನಗರ ನಾಲ್ಕನೆಯ ಹಂತದಲ್ಲಿ ಮನೆ ಕೊಟ್ಟಿದ್ದು ನಿರಾಳವೆನಿಸಿತು. ಸಹೃದಯರ ನೆರವಿನಿಂದ ನಮ್ಮ ಹಿರಿಯರಿಗೆ ಒಂದು ಶಾಶ್ವತ ನೆಲೆ ಕಲ್ಪಿಸಬೇಕೆಂಬುದು

Scanned with Oken Scanner

ಸೇವಾಯಾನದ ಹಂಬಲವಾಗಿದೆ. ಅಲ್ಲದೇ ಸೇವಾಯಾನದ ನಾಲ್ಕು ವರ್ಷದ ಬೆಳವಣಿಗೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ, ಸಂಸ್ಥೆಯ ತಮ್ಮ ಪ್ರೀತಿಯ ಚಿಲುಮೆಯನ್ನು ಹರಿಸಿದ ಎಲ್ಲಾ ಹಿರಿಯರಿಗೂ, ಮಾರ್ಗದರ್ಶಕರಿಗೂ, ದಾನಿಗಳಿಗೂ ಸೇವಾಯಾನ ಸಂಸ್ಥೆಯ ಪರವಾಗಿ ಕೃತಜ್ಞತೆಗಳು.

## 2022-23ರ ಅವಧಿಯ ಚಟುವಟಿಕೆಗಳ ವರದಿ:

17.04.2022 :

ಸೇವಾಯಾನ ಸಂಸ್ಥೆಯು ಮೈಸೂರಿನ ಹಿನಕಲ್‌ನಲ್ಲಿ ಬಾಡಿಗೆ ಕಟ್ಟಡವೊಂದನ್ನು ಪಡೆದು ವೃದ್ಧಾಶ್ರಮವನ್ನು ನಡೆಸುತ್ತಿತ್ತು. ಆದರೆ ಕಾರಣಾಂತರಗಳಿಂದ ಮನೆ ತರವು ಮಾಡಬೇಕೆಂದು ಮಾಲೀಕರು ತಿಳಿಸಿದ ಕಾರಣದಿಂದ ಅನಿವಾರ್ಯವಾಗಿ ಹಿನಕಲ್‌ನಿಂದ ವಿಜಯನಗರ ನಾಲ್ಕನೆಯ ಹಂತದ ಬಾಡಿಗೆ ಕಟ್ಟಡಕ್ಕೆ ಸ್ಥಳಾತರಗೊಳ್ಳಬೇಕಾಯಿತು.




ಪ್ರಾರಂಭದ ಕಟ್ಟಡ




ಪ್ರಸ್ತುತ ಇರುವ ಕಟ್ಟಡ

Scanned with Oken Scanner

**ದಿನಾಂಕ : 08.05.2022– ತಾಯಂದಿರ ದಿನ ಆಚರಣೆ :**

ವಿಶ್ವ ತಾಯಂದಿರ ದಿನಾಚರಣೆಯನ್ನು ಸೇವಾಯಾನ ಸಂಸ್ಥೆಯಲ್ಲಿ ಆಚರಿಸಲಾಯಿತು. ಸಂಸ್ಥೆಯ ಎಲ್ಲಾ ಹಿರಿಯರು ಒಂದು ಕುಟುಂಬದಲ್ಲಿ ತಾಯಿಯ ಪ್ರಾಮುಖ್ಯತೆ, ಅವಳ ಜವಾಬ್ದಾರಿ ಹಾಗೂ ಕೊನೆಗೆ ಏಕೆ ಅವಳು ಎಲ್ಲರಿಂದ ನಿರ್ಲಕ್ಷಿಸಲ್ಪಡುತ್ತಾಳೆ ಎಂಬ ವಿಚಾರಗಳ ಬಗ್ಗೆ ಮಾತನಾಡಿದರು. ಇದೊಂದು ಅತ್ಯಂತ ಭಾವನಾತ್ಮಕ ಕಾರ್ಯಕ್ರಮವಾಗಿತ್ತು.





**ದಿನಾಂಕ : 07,07,2022 :**

ಸೇವಾಯಾನದ ವಾರ್ಷಿಕ ಚಟುವಟಿಕೆಗಳಲ್ಲಿ ಮನೋರಂಜನೆ ಅತ್ಯಂತ ಮುಖ್ಯವೆಂದೇ ಭಾವಿಸಿ, ಸಂಸ್ಥೆಯ ಹಿರಿಯರನ್ನು ಚಾರ್ಲಿ ಎಂಬ ಕನ್ನಡ ಚಿತ್ರ ನೋಡಲು ಮೈಸೂರಿನ ಉಡ್‌ಲ್ಯಾಂಡ್ಸ್ ಚಿತ್ರಮಂದಿರಕ್ಕೆ ಕರೆದುಕೊಂಡು ಹೋಗಲಾಗಿತ್ತು. ಈ ಪ್ರಯತ್ನ ಅವರಲ್ಲಿ ಬಹಳಷ್ಟು ಸಂತೋಷವನ್ನು ಹಾಗೂ ಮನೋಸಾಮಾಜಿಕ ಬದಲಾವಣೆಯನ್ನು ತಂದುಕೊಟ್ಟಿತು.





Scanned with Oken Scanner

**ದಿನಾಂಕ : 13,08,2022 :**

ವಿವಿಧ ವಿಶ್ವವಿದ್ಯಾನಿಲಯಗಳ ಸಮಾಜಕಾರ್ಯ ವಿದ್ಯಾರ್ಥಿಗಳು ಸೇವಾಯಾನ ಸಂಸ್ಥೆಯನ್ನು ಅಧ್ಯಯನ ಕೇಂದ್ರವನ್ನಾಗಿಸಿಕೊಂಡಿವೆ. ಅಂತೆಯೇ ಪುತ್ತೂರು ಸರ್ಕಾರಿ ಬಿಎಸ್‌ಡಬ್ಲ್ಯೂ ಕಾಲೇಜಿನ ಸಮಾಜಕಾರ್ಯ ವಿದ್ಯಾರ್ಥಿಗಳು ಸೇವಾಯಾನ ಸಂಸ್ಥೆಗೆ ಭೇಟಿ ನೀಡಿ, ಸಂಸ್ಥೆಯ ಚಟುವಟಿಕೆಗಳ ಬಗ್ಗೆ ತಿಳಿದುಕೊಂಡಿರುತ್ತಾರೆ.




**ದಿನಾಂಕ : 15,08,2022 :**

ಸೇವಾಯಾನ ಸಂಸ್ಥೆಯಿಂದ ಸ್ವಾತಂತ್ರ್ಯ ಅಮೃತಮಹೋತ್ಸವವನ್ನು ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಡಾ. ರೇಖಾರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸ್ವಾತಂತ್ರ್ಯದ ಪರಿಕಲ್ಪನೆಯ ಬಗ್ಗೆ ಮಾತನಾಡಿದರು. ಹಾಗೂ ಈ ದಿನ ಜೆಎಸ್‌ಎಸ್ ಆಸ್ಪತ್ರೆಯ ಸಿಬ್ಬಂದಿಗಳಿಂದ ಹಿರಿಯರಿಗೆ ಸಾಮಾನ್ಯ ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ಸೇವಾಯಾನ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿತ್ತು.






Scanned with Oken Scanner

**ದಿನಾಂಕ : 28,08,2022 :**

ಸೇವಾಯಾನ ಸಂಸ್ಥೆಯ ಸಾಂಸ್ಕೃತಿಕ ಕಾರ್ಯಕ್ರಮಗಳ ಭಾಗವಾಗಿ ಪತಾಂಜಲಿ ಯೋಗಶಿಕ್ಷಣ ಸಂಸ್ಥೆಯಿಂದ ಭಜನೆ ಹಾಗೂ ಅಗ್ನಿಹೋತ್ರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.





**ದಿನಾಂಕ : 05,09,2022 :**

ಸೇವಾಯಾನ ಸಂಸ್ಥೆಯ ಸೇವಾಕಾರ್ಯಗಳನ್ನು ಪರಿಗಣಿಸಿ ಮೈಸೂರಿನ ಕರುನಾಡ ಮಹಿಳಾ ರಕ್ಷಣಾ ವೇದಿಕೆಯಿಂದ ಸೇವಾಯಾನ ಸಂಸ್ಥೆಯ ಅಧ್ಯಕ್ಷರಾದ ಪ್ರಭಾಮಣಿ.ಎಸ್‌ರವರಿಗೆ "ಮಿನುಗು ತಾರೆ" ಎಂಬ ಪ್ರಶಸ್ತಿಯನ್ನು ನೀಡಿರುತ್ತಾರೆ.





Scanned with Oken Scanner

**ದಿನಾಂಕ : 11,09,2022 :**

ಸಂಗೀತದಿಂದ ಆರೋಗ್ಯ, ಮಾನಸಿಕ ಸ್ಥಿಮಿತತೆ ಎಲ್ಲವೂ ನಿಯಂತ್ರಣದಲ್ಲಿರುತ್ತದೆ, ಸಂಗೀತ ಚಿಕಿತ್ಸಾತ್ಮಕ ವಿಧಾನವೂ ಹೌದು. ಈ ನಿಟ್ಟಿನಲ್ಲಿ ಸೇವಾಯಾನ ಸಂಸ್ಥೆಯು ಖ್ಯಾತ ಆರೋಗ್ಯತಜ್ಞ ಡಾ.ಖಾದರ್ ಹಾಗೂ ಖ್ಯಾತ ಹಿನ್ನೆಲೆಗಾಯಕ ಶ್ರೀಹರ್ಷರವರು ಸಂಯುಕ್ತವಾಗಿ ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿದ್ದ ರಾಗಾರೋಗ್ಯ ಕಾರ್ಯಕ್ರಮಕ್ಕೆ ಸಂಸ್ಥೆಯ ಆಶ್ರಿತರನ್ನು ಕರೆದುಕೊಂಡು ಹೋಗಲಾಗಿತ್ತು.










Scanned with Oken Scanner

**ದಿನಾಂಕ :10.11.2022 :**

ಒಂದು ಸಂಸ್ಥೆಯೊಳಗೆ ಇರುವವರು ಸೇವೆ ಪಡೆಯುವುದು ಎಷ್ಟು ಮುಖ್ಯವೋ, ಅದನ್ನು ಅಷ್ಟೇ ಜವಾಬ್ದಾರಿಯಿಂದ ಹಿಂದಿರುಗಿಸುವುದೂ ಮುಖ್ಯ" ಎಂಬ ವಿಚಾರವಾಗಿ ಅಕ್ಟೋಬರ್ ತಿಂಗಳಲ್ಲಿ ಕಾರ್ಯಗಾರವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಮೈಸೂರಿನ ಸ್ನೇಹಬಿಂದು ಸಂಸ್ಥೆಯ ನಿರ್ದೇಶಕಿ ಮೇರಿ ಲೋಬೋರವರು ಭಾಗವಹಿಸಿದ್ದರು.





**ದಿನಾಂಕ:08.11.2022 :**

ದೈನಂದಿನ ಜೀವನದಲ್ಲಿ ಆಯುರ್ವೇದ ಪದ್ಧತಿಯ ಅಲವಡಿಕೆಯ ಪ್ರಾಮುಖ್ಯತೆಯ ಕುರಿತು ಸೇವಾಯಾನ ಸಂಸ್ಥೆಯ ಹಿರಿಯರಿಗಾಗಿ ಮೈಸೂರು ಸರ್ಕಾರಿ ಆಯುರ್ವೇದಿಕ್ ಕಾಲೇಜಿನ ವೈದ್ಯರು ಹಾಗೂ ವಿದ್ಯಾರ್ಥಿಗಳಿಂದ ಕಾರ್ಯಗಾರವನ್ನು ಆಯೋಜಿಸಲಾಗಿತ್ತು.





Scanned with Oken Scanner

**ದಿನಾಂಕ :15.11.2022 :**

ಹೊಸ ಜಾಗ, ಹೊಸ ಜನ, ಹೊಸ ಚಟುವಟಿಕೆಗಳು ಸಂಸ್ಥೆಯ ಹಿರಿಯರನ್ನು ಸದಾ ಲವಲವಿಕೆಯಿಂದ ಇಡಲು ಸಹಕಾರಿಯಾಗಿರುತ್ತವೆ ಎಂಬದನ್ನು ಸೇವಾಯಾನ ಬಲವಾಗಿ ನಂಬುತ್ತದೆ. ಹೀಗಾಗಿಯೇ ಆಗಿಂದಾಗ್ಗೆ ತನ್ನ ಆಶ್ರಿತರಿಗಾಗಿ ವಿನೂತನ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ ಮೈಸೂರಿನ ಕಾರ್ಪೋರೇಟ್ ಕಂಪೆನಿಗಳು ಆಯೋಜಿಸಿದ್ದ ಹೆಚ್‌ಆರ್ ದಸರಾಕ್ಕೆ ಹಿರಿಯರೆಲ್ಲರನ್ನು ಕರೆದುಕೊಂಡು ಹೋಗಲಾಗಿತ್ತು.





**ದಿನಾಂಕ :20.12.2022:**

ಮಾತೆ ಶಾರದದೇವಿಯವರ ಜನ್ಮದಿನದ ಪ್ರಯುಕ್ತ ಯುವ ಬ್ರಿಗೇಡ್‌ನವರ ಸಂಯುಕ್ತ ಅಶ್ರಯದಲ್ಲಿ “ಅಮ್ಮ ನಮನ” ಎಂಬ ಅರ್ಥಪೂರ್ಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಎಲ್ಲಾ ಹಿರಿಯರ ಪಾದಪೂಜೆ ಮಾಡಿ, ಅವರಿಗೆ ತಾಂಬೂಲ ಹೊಸ ಸೀರೆ ನೀಡಿ ಅವರಿಂದ ಆಶೀರ್ವಾದ ಪಡೆಯಲಾಯಿತು. ಕೌಟುಂಬಿಕ ನಿರ್ಲಕ್ಷ್ಯಕ್ಕೆ ಒಳಗಾಗಿ ವೃದ್ದಾಶ್ರಮದಲ್ಲಿ ಆಶ್ರಯ ಪಡೆದಿರುವ ಹಿರಿಯರಿಗೆ ಊಟ, ವಸತಿಗಳಷ್ಟೇ ಅಲ್ಲದೇ ಅವರಿಗೆ ಕೌಟುಂಬಿಕ ವಾತಾವರಣ, ಸ್ವಾತಂತ್ರ್ಯ, ಘನತೆ, ಗೌರವಗಳನ್ನು ಒದಗಿಸಿಕೊಡುವುದು ಆದ್ಯ ಕರ್ತವ್ಯವೆಂಬುದನ್ನು ಸೇವಾಯಾನ ಭಾವಿಸಿರುವ ಕಾರಣದಿಂದಲೇ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಯಿತು.





Scanned with Oken Scanner

**ದಿನಾಂಕ : 20.01.2023 :**

ಮೈಸೂರಿನ ಸ್ವಯಂಸೇವಾ ಸಂಸ್ಥೆಗಳು ಆಯೋಜಿಸಿದ್ದ "ಎನ್‌ಜಿಒ ಮೇಳ"ದಲ್ಲಿ ಸೇವಾಯಾನ ಸಂಸ್ಥೆಯು ಬಾಗವಹಿಸಿ, ತನ್ನ ಸೇವಾಕಾರ್ಯಗಳನ್ನು ವ್ಯಯವಸ್ಥಿತವಾಗಿ ಆಯೋಜಕರು ಹಾಗೂ ಸಾರ್ವಜನಿಕರ ಮುಂದೆ ತೆರೆದಿಟ್ಟು, ಪ್ರಶಂಸಗೆ ಪಾತ್ರವಾಯಿತು.








**ದಿನಾಂಕ : 25.01.2023:**

ಸೇವಾಯಾನ ಸಂಸ್ಥೆಯು ತನ್ನ ಮೂರು ವರ್ಷಗಳ ಸೇವಾವಧಿಯನ್ನು ಅತ್ಯಂತ ಯಶಸ್ವಿಯಾಗಿ ಪೂರೈಸಿದ್ದು, ಈ ಹಿನ್ನೆಲೆಯಲ್ಲಿ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆಯನ್ನು ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಂಸ್ಥೆಗೆ ನೆರವಾದ ಇಬ್ಬರು ಹಿರಿಯ ನಾಗರೀಕರಾದ ಯೋಗಪಟು ಶ್ರೀ ದೊರೆಸ್ವಾಮಿ ಹಾಗೂ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಶಶಿಕಲಾರವರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಗೆ ನೆರವಾದ ದಾನಿಗಳನ್ನು ಸ್ಮರಿಸಲಾಯಿತು. ಹಿರಿಯರಾದ ಶ್ರೀಮತಿ ಕಾಂತಿ ಮತ್ತು ಶ್ರೀ ಪ್ರಕಾಶ್ ಹಾಗೂ ಶ್ರೀಮತಿ ಸ್ನೇಹಾ ಮತ್ತು ಶ್ರೀ ಕೆ.ರಾಘವೇಂದ್ರಪ್ರಸಾದ್‌ರವರು ಮುಖ್ಯ ಅತಿಥಿಗಳಾಗಿ ಬಾಗವಹಿಸಿದ್ದರು. ದಿವ್ಯಜ್ಯೋತಿ ಚಾರಿಟಬಲ್ ಟ್ರಸ್ಟ್‌ನ ಅಂಧಮಕ್ಕಳಿಂದ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.






Scanned with Oken Scanner









**ದಿನಾಂಕ :30.01.2023:**

ಸೇವಾಯಾನ ಸಂಸ್ಥೆಯ ಸೇವಾಕಾರ್ಯಗಳನ್ನು ಗುರುತಿಸಿದ ಮೈಸೂರಿನ ಕೆ.ಎನ್.ಆರ್.ಪಿ.ಟ್ರಸ್ಟ್ ಸೇವಾಯಾನ ಸಂಸ್ಥೆಗೆ ಡಾ.ಅಬ್ದುಲ್ ಕಲಾಂ ಪ್ರಶಸ್ತಿ ಪ್ರಧಾನ ಮಾಡಿದೆ.






Scanned with Oken Scanner

**ದಿನಾಂಕ : 11.03.2023:**

ಮೈಸೂರಿನ ಶ್ರೀ ಶಾರದಾ ಮಹಿಳಾ ಸೇವಾ ಸಮಾಜವು ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಸೇವಾಯಾನ ಸಂಸ್ಥೆಯ ಸೇವಾಕಾರ್ಯಗಳನ್ನು ಶ್ಲಾಘಿಸಿ, ಸಂಸ್ಥೆಯ ಮುಖ್ಯಸ್ಥರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಗೌರ ಸಮರ್ಪಣೆ ಮಾಡಿರುತ್ತದೆ.









**ದಿನಾಂಕ :17.03.2023:**

ಕನ್ನಡ ಚಲನಚಿತ್ರರಂಗದ ದೃವತಾರೆ ದಿವಂಗತ ಪನೀತ್ ರಾಜ್‌ಕುಮಾರ್‌ರವರ ಸ್ಮರಣಾರ್ಥ ಸೇವಾಯಾನ ಸಂಸೆಯಲ್ಲಿ "ಅಪ್ಪು ನಮನ" ಎಂಬ ಕಾರ್ಯಕ್ರಮವನ್ನು ಅಪ್ಪು ಅಭಿಮಾನಿಗಳ ಸಂಘದ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿತ್ತು.

Scanned with Oken Scanner

**ದಿನಾಂಕ : 18.03.2023:**

ಮೈಸೂರಿನ ಪ್ರತಿಷ್ಟಿತ ಜೆಸಿ ಕಾಲೇಜಿನಲ್ಲಿ ನಡೆದ ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸೇವಾಯಾನ ಸಂಸ್ಥೆಯನ್ನು ಅತ್ಯಂತ ಪಾರದರ್ಶಕ ಹಾಗೂ ವ್ಯವಸ್ಥಿತ ಸಂಸ್ಥೆ ಎಮದು ಪರಿಗಣಿಸಿ, ಗೌರವ ಸಮರ್ಪಣೆ ಮಾಡಿರುತ್ತಾರೆ.






## 2022–23ರ ಅವಧಿಯ ಯೋಜನೆಗಳು :

### 1. ನಮ್ಮ ಜಲ ಭದ್ರತೆ ಯೋಜನೆ:

ಸೇವಾಯಾನ ಸಂಸ್ಥೆಯು ಮೈಸುರಿನ ಏಷಿಯನ್ ಪೇಂಟ್ಸ್ ಹಾಗೂ ಕ್ರೆಡಿಟ್–ಐ ಸಂಸ್ಥೆಯ ಸಹಯೋಗದೊಂದಿಗೆ ನಂಜನಗೂಡು ತಾಲ್ಲೂಕು ಬದನವಾಳು ಗ್ರಾಮದಲ್ಲಿ ಕೆರೆ ಹೂಳೆತ್ತುವ ಯೋಜನೆಯನ್ನು ಹಮ್ಮಿಕೊಂಡಿದ್ದು, ಈ ಯೋಜನೆಯಲ್ಲಿ "ಹಾಲೊಸ್ತಿಕೆರೆ" ಎಂಬ ಒಂದು ಕೆರೆಯ ಹೂಳನ್ನು ತೆಗೆಯಲಾಗಿದೆ. ನುರಿತ ಸಿಬ್ಬಂದಿಗಳ ಕೊರತೆಯಿಂದಾಗಿ ಈ ಯೋಜನೆಯನ್ನು ಸ್ಥಗಿತಗೊಳಿಸಲಾಯಿತು.






Scanned with Oken Scanner









**2, ಸೇವಾ ಸಬಲ ಯೋಜನೆ :**

ಇದು ಸೇವಾಯಾನ ಸಂಸ್ಥೆಯ ಅತ್ಯಂ ಮಹತ್ವಾಕಂಕ್ಷಿ ಯೋಜನೆಯಾಗಿದ್ದು, ಆರ್ಥಿಕವಾಗಿ ಹಿಂದುಳಿದಿರುವ ಸಮಾಜದ ಮುಖ್ಯವಾಹಿನಿಯ ಮಹಿಳೆಯರಿಗೆ ಟೈಲರಿಂಗ್, ಪೇಪರ್ ಬ್ಯಾಗ್ ಹಾಗೂ ಬಟ್ಟೆ ಬ್ಯಾಗ್ ತಯಾರಿಕಾ ತರಬೇತಿಗಳನ್ನು ನೀಡುತ್ತಿದೆ. ಈ ಯೋಜನೆಯಲ್ಲಿ ಈ ವರ್ಷ 20 ಜನ ಮಹಿಳೆಯರಿಗೆ ಟೈಲರಿಂಗ್ ತರಬೇತಿ, 50 ಜನ ಮಹಿಳೆಯರಿಗೆ ಪೇಪರ್ ಬ್ಯಾಗ್ ತರಬೇತಿ ಹಾಗೂ 40 ಜನ ಮಹಿಳೆಯರಿಗೆ ಬಟ್ಟೆ ಬ್ಯಾಗ್ ತಯಾರಿಕಾ ತರಬೇತಿಗಳನ್ನು ನೀಡಲಾಗಿದೆ.



Scanned with Oken Scanner








Scanned with Oken Scanner

# ಮಾಧ್ಯಮ ವರದಿಗಳು :

ಪ್ರತಿನಿಧಿ
...ಇದು ನಮ್ಮದು
ಪ್ರಾದೇಶಿಕ ದಿನಪತ್ರಿಕೆ
Page-10
25 Jan 2023

**ಸುದ್ದಿ ಪಂಕ್ತಿ**

## ಸೇವಾಯಾನ ಸಂಸ್ಥೆಯಿಂದ ಮಾದರಿ ಸೇವೆ



ಪ್ರತಿನಿಧಿ ಫೋಟೋ

**ಪ್ರತಿನಿಧಿ ವರದಿ** ಮೈಸೂರು
ಸೇವಾಯಾನ ಟ್ರಸ್ಟ್‌ನ ಮೂರನೆಯ ವರ್ಷದ ಸಂಸ್ಥಾಪನಾ ದಿನಾಚರಣೆಯನ್ನು ಸಂಸ್ಥೆಯ ಆವರಣದಲ್ಲಿ ಆಚರಿಸಲಾಯಿತು.

▸ ಶಾರದ ವಿಲಾಸ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಎ.ಶಶಿಕಲಾ ಬಣ್ಣನೆ

ಸಂಸ್ಥೆಯ ಅಧ್ಯಕ್ಷೆ ಪ್ರಭಾಮಣಿ ಮಾತನಾಡಿ, ಸೇವಾಯಾನ ಸಂಸ್ಥೆ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿದೆ. ಪ್ರಾರಂಭದ ಎರಡು ವರ್ಷಗಳಲ್ಲಿನ ಕೋವಿಡ್ ಸಂಕಷ್ಟದ ಸಮಯದಲ್ಲಿ ಸಂಸ್ಥೆಯು ದಿನಸಿ ಪದಾರ್ಥಗಳ ಕಿಟ್ ಹಂಚಿಕೆ, ಮಕ್ಕಳಿಗೆ ಮತ್ತು ವೃದ್ಧರಿಗೆ ಪೌಷ್ಟಿಕ ಆಹಾರಗಳ ಪೂರೈಕೆ, ಮಾಸ್ಕ್ ಹಾಗೂ ಸ್ಯಾನಿಟೈಜರ್ ವಿತರಣೆ, ಆತಂಕದಲ್ಲಿದ್ದ ಸಮುದಾಯದ ಜನರಿಗೆ ಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಆಪ್ತ ಸಮಾಲೋಚನೆಯಂತಹ ಕಾರ್ಯಗಳ ಮೂಲಕ ಜನಮನ್ನಣೆ ಗಳಿಸಿದೆ ಎಂದರು. ಸಮುದಾಯದಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ನಲವತ್ತು ಮಂದಿ ಮಹಿಳೆಯರಿಗೆ ಟೈಲರಿಂಗ್ ವೃತ್ತಿ ತರಬೇತಿಯನ್ನು ನೀಡಿದೆ. ತನ್ನ ಮೂರು ವರ್ಷಗಳ ಅವಧಿಯಲ್ಲಿ 262 ಮಂದಿ ಮಹಿಳಾ ಹಿರಿಯ ನಾಗರಿಕರಿಗೆ ಉಚಿತವಾಗಿ ಆಶ್ರಯ ಹಾಗೂ ಪುರ್ನವಸತಿ ಕಾರ್ಯಕ್ರಮಗಳನ್ನು ಮಾಡಿದೆ ಎಂದರು.

ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಜೆ.ಪಿ.ನಗರದ ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯ ದೊರೆಸ್ವಾಮಿ ಹಾಗೂ ಶಾರದ ವಿಲಾಸ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎ.ಶಶಿಕಲಾ ಅವರನ್ನು ಸನ್ಮಾನಿಸಲಾಯಿತು.

ಗೌರವ ಸ್ವೀಕರಿಸಿದ ದೊರೆಸ್ವಾಮಿ ಮಾತನಾಡಿ, ಹಿರಿಯರು ಯೋಗ, ಧ್ಯಾನ, ಪ್ರಾರ್ಥನೆಗಳನ್ನು ಮೈಗೂಡಿಸಿಕೊಂಡು, ನಮ್ಮ ಕೈಲಾದಷ್ಟು ಇತರರಿಗೆ ನೆರವಾಗುತ್ತಾ ಬದುಕೋಣ ಎಂದರು.

ಪ್ರೊ.ಶಶಿಕಲಾ ಮಾತನಾಡಿ, ಊಟ, ವಸತಿಗಳಷ್ಟೇ ಹಿರಿಯರ ಆರೈಕೆಯ ಮಾನದಂಡಗಳಲ್ಲ, ಅವರಿಗೊಂದು ಕೌಟುಂಬಿಕ ವಾತಾವರಣ ಸೃಷ್ಟಿಸಿಕೊಡುವುದು, ಉತ್ತಮ ವೈದ್ಯಕೀಯ ನೆರವು ಕೊಡಿಸುವುದು, ಭಾವನಾತ್ಮಕವಾಗಿ ಕುಗ್ಗದಂತೆ ಆಗಿಂದಾಗ್ಗೆ ಅವರಲ್ಲಿ ಚೈತನ್ಯ ತುಂಬುವುದು ಸಹ ಬಹಳ ಮುಖ್ಯ, ಆಗ ಮಾತ್ರ ವೃದ್ಧಾಶ್ರಮಗಳ ಸೇವೆ ಸಾರ್ಥಕವೆನಿಸುವುದು. ಈ ನಿಟ್ಟಿನಲ್ಲಿ ಸೇವಾಯಾನ ಸಂಸ್ಥೆಯ ಸೇವೆ ಪರಿ ಮಾದರಿ ಎನಿಸುತ್ತದೆ ಎಂದರು. ಶ್ರೀ ಸಾಯಿ ಬ್ಯುಸಿನೆಸ್ ಅಸೋಸಿಯೇಟ್ಸ್ ಮಾಲೀಕ ಕೆ.ರಾಘವೇಂದ್ರ ಪ್ರಸಾದ್ , ಸ್ನೇಹಾ ರಾಘವೇಂದ್ರ ಪ್ರಸಾದ್, ಸ್ವಯಂ ಸೇವಕರಾದ ಕಿರಣ್, ಮೇಲ್ವಿಚಾರಕಿ ಮಂಜುಳಾ, ಕಾರ್ಯದರ್ಶಿ ಅಂಜು, ಕೆ.ಎಂ. ಪ್ರಭುಶಂಕರ್ , ಎಂ. ಮಂಜುನಾಥಸ್ವಾಮಿ, ರಂಜಿತ್ ಇದ್ದರು.

ಪ್ರತಿನಿಧಿ
...ಇದು ನಮ್ಮದು
ಪ್ರಾದೇಶಿಕ ದಿನಪತ್ರಿಕೆ
Page-4-5
12 Mar 2023

## 'ಸೇವೆ'ಯ ಯಾನ



ಮಹಿಳಾ ಸಾಧಕರು



Scanned with Oken Scanner

## ಸಂಘ–ಸಂಸ್ಥೆಗಳ ಸಹಯೋಗ :

ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಬಿಸಿ ಟ್ರಸ್ಟ್, ಕುವೆಂಪುನಗರ, ಮೈಸೂರು

ಶಕ್ತಿಧಾಮ, ಮೈಸೂರು

ಕ್ರೆಡಿಟ್–ಐ ಸಂಸ್ಥೆ, ಮೈಸೂರು

ಎನ್‌ಜಿಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಮೈಸೂರು

ಗ್ರಾಮ್ ಸಂಸ್ಥೆ, ಮೈಸೂರು

ಬಸವ ಸಮಿತಿ, ವಿಜಯನಗರ–ಹೆಬ್ಬಾಳು ಶಾಖೆ, ಮೈಸೂರು

ಸ್ನೇಹಬಿಂದು ಚಾರಿಟಬಲ್ ಟ್ರಸ್ಟ್, ಮೈಸೂರು

ಗುಡ್‌ವಿಷ್ ಪೌಂಡೇಷನ್, ಮೈಸೂರು

ಸವಿನೆನೆಪು ಫೌಂಡೇಷನ್, ಮೈಸೂರು

ಸುಪ್ರಿಯಾ ಆಸ್ಪತ್ರೆ, ಹಿನಕಲ್, ಮೈಸೂರು

ಪೀಪಲ್ ಫಾರ್ ಪೀಪಲ್, ಮೈಸೂರು

ಲಯನ್ಸ್, ರೋಟರಿ ಹಾಗೂ ಇನ್ನರ್ ವೀಲ್ ಕ್ಲಬ್‌ಗಳ ವಿವಿಧ ಶಾಖೆಗಳು

## ಸೇವಾಸಬಲ ಯೋಜನೆಯ ಸಹಯೋಗ :

ಮೈಸೂರು ಜಿಲ್ಲಾ ಹಾಪ್‌ಕಾಮ್ಸ್, ಮೈಸೂರು

ಭೂಮಿ ಬಾಸ್ಕೆಟ್, ಜಯಲಕ್ಷ್ಮಿಪುರಂ, ಮೈಸೂರು

ಶ್ರೀಲಕ್ಷ್ಮಿ ಸೂಪರ್‌ಮಾರ್ಕೆಟ್, ವಿಜಯನಗರ ಮೂರನೆಯ ಹಂತ, ಮೈಸೂರು

ಶಾಪ್ ಫಾರ್ ಯೂ ಸೂಪರ್ ಮಾರ್ಕೆಟ್, ಗೋಕುಲಂ, ಮೈಸೂರು

## ಪ್ರಮುಖ ದಾನಿಗಳು :

ಶ್ರೀ ಜೈ ಪ್ರಕಾಶ್‌ರವರು– ಯಾದವಗಿರಿ

ಶ್ರೀಮತಿ ಸ್ನೇಹ ಮತ್ತು ಶ್ರೀ ರಾಘವೇಂದ್ರ ಪ್ರಸಾದ್‌ರವರು, ಜಯನಗರ, ಮೈಸೂರು

ಶ್ರೀ ಟಿ.ಎಸ್. ಶಿವಪ್ಪ, ನಿವೃತ್ತ ಎಜಿ, ಬೆಂಗಳೂರು

ಶ್ರೀ ಪಾರ್ಥಸಾರಥಿ, ರೈಲ್ವೆ ಇಲಾಖೆ, ಮೈಸೂರು

ಡಾ. ಆರ್. ಬಸವರಾಜು ಆರ್ ಶ್ರೇಷ್ಠರವರು, ರೂಪನಗರ, ಮೈಸೂರು

ಶ್ರೀ ಸತ್ಯನಾರಾಯಣ್ ಮತ್ತು ಕುಟುಂಬದವರು, ಜೆ.ಪಿ.ನಗರ, ಮೈಸೂರು

Scanned with Oken Scanner

ಶ್ರೀ ಮಲ್ಲಿಕಾರ್ಜುನಯ್ಯ, ಬೆಂಗಳೂರು

ಶ್ರೀ ಎನ್.ಮೋಹನ್ ಕುಮಾರ್, ಉತ್ತನಹಳ್ಳಿ, ಮೈಸೂರು

ಶ್ರೀ ವಿರೂಪಾಕ್ಷಸ್ವಾಮಿ, ನಂಜನಗೂಡು

ಪ್ರೊ.ಶಶಿಕಲಾ, ಗೋಕುಲಂ, ಮೈಸೂರು

ಶ್ರೀಮತಿ ಮೀರಾ ಗೋಡ್ಕಿಂಡಿ ಹಾಗೂ ದೀಪಾ ಗೋಡ್ಕಿಂಡಿ

ಶ್ರೀ ಪ್ರೇಮ್ ಕುಮಾರ್, ವಿಜಯನಗರ ಮೊದಲನೆಯ ಹಂತ, ಮೈಸೂರು

ಅನನ್ಯಭಟ್‌ರವರು, ಖ್ಯಾತ ಹಿನ್ನೆಲೆ ಗಾಯಕರು, ಮೈಸೂರು

ಶ್ರೀಮತಿ ಶಿವಾನಿ, ಸದರ್ನ್ ಸ್ಟಾರ್ ಹೋಟೆಲ್, ಮೈಸೂರು

ಶ್ರೀಮತಿ ಸಿಂಧು ಸುರೇಶ್, ಮೈಸೂರು

ಶ್ರೀ ರಘು ಎಸ್.ಪಿ, ಶ್ರೀ ಲಕ್ಷ್ಮಿ ಮೆಡಿಕಲ್ ಸ್ಟೋರ್ಸ್, ಮೈಸೂರು

ಶ್ರೀ ಆರ್. ಚಂದ್ರು- ಹೆಬ್ಬಾಳು

ಶ್ರೀ ಹರ್ಷಿತ್ ಕ್ವಾಲಿಟಿ ಸ್ಪಿರಿಟ್ಸ್, ಮೈಸೂರು

ಅಲ್ಲದೇ ನೂರಾರು ಜನ ದಾನಿಗಳು ಸೇವಾಯಾನ ಸಂಸ್ಥೆಯ ಅಶ್ರಿತರಿಗೆ, ವಿಸೇಷ ಊಟ, ಬಟ್ಟೆಗಳು, ಆಹಾರ ಸಾಮಗ್ರಿಗಳು ಹಾಗೂ ಔಷಧಿಗಳನ್ನು ದೇಣಿಗೆಯಾಗಿ ನೀಡಿರುವುದನ್ನು ನಾವಿಲ್ಲಿ ಸ್ಮರಿಸುತ್ತೇವೆ.

## ಸರ್ಕಾರಿ ಸಹಯೋಗ :

ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆ, ಮೈಸೂರು

ಪೊಲೀಸ್ ಠಾಣೆ, ವಿಜಯನಗರ 2ನೇ ಹಂತ, ಮೈಸೂರು

## ಬ್ಯಾಂಕ್ ಪಾಲುದಾರರು ಹಾಗೂ ಖಾತೆಯ ವಿವರ

ಎಸ್‌ಬಿಐ, ವಿಜಯನಗರ 2ನೇ ಹಂತ, ಮೈಸೂರು

ಖಾತೆಯ ಹೆಸರು – ಸೇವಾಯಾನ ಟ್ರಸ್ಟ್

ಖಾತೆ ಸಂಖ್ಯೆ – 29123150255

ಐಎಫ್‌ಎಸ್‌ಸಿ ಕೋಡ್ –SBIN0040646

## ಲೆಕ್ಕ ಪರಿಶೋಧಕರು

ಶ್ರೀ ನಾಗಭೂಷಣ ಆರಾಧ್ಯರವರು, ಸಿಎ, ಆರಾಧ್ಯ ಅಂಡ್ ಕೋ, ಮೈಸೂರು

Scanned with Oken Scanner